# ಕರ್ನಾಟಕ ವಿಧಾನ ಪರಿಷತ್ತು

1) ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

2) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : (1699) 176

3) ಉತ್ತರಿಸಬೇಕಾದ ದಿನಾಂಕ : 18-03-2026

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಕಳೆದ 3 ವರ್ಷದಲ್ಲಿ ಮೀನುಗಾರಿಕೆ ವೃತ್ತಿ ನಡೆಸುವವರಿಗೆ ಮಂಜೂರು ಮಾಡಲಾದ ಒಟ್ಟು ಮನೆಗಳ ಸಂಖ್ಯೆ ಎಷ್ಟು; ಆಯ್ಕೆ ಮಾಡಲಾದ ಫಲಾನುಭವಿಗಳ ಸಂಖ್ಯೆ ಎಷ್ಟು;<br>(ಜಿಲ್ಲಾವಾರು ಮಾಹಿತಿ ನೀಡುವುದು )</td><td>ರಾಜ್ಯದಲ್ಲಿ ಕಳೆದ 3 ವರ್ಷದಲ್ಲಿ ಮತ್ಸ್ಯಾಶ್ರಯ ಯೋಜನೆಯಡಿ ಮಂಜೂರು ಮಾಡಲಾದ ಒಟ್ಟು ಮನೆಗಳ ಸಂಖ್ಯೆ 15000.
<table>
<tr><th>ವರ್ಷ</th><th>ಮಂಜೂರಾದ ಮನೆಗಳ ಸಂಖ್ಯೆ</th><th>ಹಂಚಿಕೆಯಾದ ಮನೆಗಳ ಸಂಖ್ಯೆ</th><th>ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ</th></tr>
<tr><td>2022-23</td><td>5000</td><td>4983</td><td>3618</td></tr>
<tr><td>2023-24</td><td colspan="3">ಯಾವುದೇ ಮನೆಗಳು ಹಂಚಿಕೆಯಾಗಿರುವುದಿಲ್ಲ</td></tr>
<tr><td>2024-25</td><td>10000</td><td>9479</td><td>1725</td></tr>
<tr><td>ಒಟ್ಟು</td><td>15000</td><td>14462</td><td>5343</td></tr>
</table>
ಆಯ್ಕೆ ಮಾಡಲಾದ ಫಲಾನುಭವಿಗಳ ಸಂಖ್ಯೆ 5343.<br><br>ಹಂಚಿಕೆ ಮಾಡಲಾದ ಮನೆಗಳ ಸಂಖ್ಯೆ 14462. ಜಿಲ್ಲಾವಾರು ಮಾಹಿತಿ <u>ಅನುಬಂಧ -1</u> ರಲ್ಲಿ ಲಗತ್ತಿಸಿದೆ. ಸಚಿವರ ವಿವೇಚನಾ ಕೋಟಾದಲ್ಲಿ 2022-23 ರ ಸಾಲಿನಲ್ಲಿ 400 ಮನೆಗಳು ಮತ್ತು 2024-25ರ ಸಾಲಿನಲ್ಲಿ 999 ಮನೆಗಳನ್ನು ಹಂಚಿಕೆ ಮಾಡಲಾಗಿದೆ.</td></tr>
<tr><td>ಆ)</td><td>ಸದರಿ ಮನೆ ಮಂಜೂರಾತಿಗೊಳಿಸಲು ಫಲಾನುಭವಿಗೆ ಇರಬೇಕಾದ ಅರ್ಹತೆಗಳು ಏನು;</td><td>ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗೆ ಇರಬೇಕಾದ ಅರ್ಹತೆಗಳು ಈ ಕೆಳಗಿನಂತಿದೆ:-<br><br>1) ಫಲಾನುಭವಿಯು ಹುಟ್ಟು / ವೃತ್ತಿಯಲ್ಲಿ ಮೀನುಗಾರರಾಗಿರ ಬೇಕು. ಮೀನುಗಾರಿಕೆಗೆ ಪೂರಕವಾದ ಚಟುವಟಿಕೆಗಳಲ್ಲಿ ತೊಡಗಿರುವವರನ್ನು ಸಹ ಆಯ್ಕೆ ಮಾಡಬಹುದಾಗಿದೆ.<br><br>2) ಫಲಾನುಭವಿಯು ವಿವಾಹಿತನಾಗಿರಬೇಕು.<br><br>3) ಫಲಾನುಭವಿಯು ಸ್ವಂತ ನಿವೇಶನ ಹೊಂದಿರಬೇಕು.</td></tr>
</table>

| | | |
|---|---|---|
| | | 4) ಫಲಾನುಭವಿಯು ಸ್ಥಳೀಯ ಮೀನುಗಾರರ ಸಹಕಾರ ಸಂಘದ ಸದಸ್ಯನಾಗಿರಬೇಕು. ಇಲ್ಲದಿದ್ದಲ್ಲಿ ಕಳೆದ ಮೂರು ವರ್ಷಗಳಿಂದ ಮೀನುಗಾರಿಕೆಯಲ್ಲಿ ತೊಡಗಿರುವ ಬಗ್ಗೆ ಸಂಬಂಧಿಸಿದ ಮೀನುಗಾರಿಕೆ ಸಹಾಯಕ ನಿರ್ದೇಶಕರು ದೃಢೀಕರಿಸಬೇಕು.<br>5) ಫಲಾನುಭವಿಯು ಸರ್ಕಾರದ ಇತರೆ ವಸತಿ ಯೋಜನೆಯಡಿ ಸೌಲಭ್ಯ ಪಡೆದಿರಬಾರದು. ಈ ಸಂಬಂಧ ಗ್ರಾಮ ಪಂಚಾಯತ್/ನಗರ ಸ್ಥಳೀಯ ಮುನಿಸಿಪಾಲಿಟಿ, ನಗರಸಭೆ ಮುಂತಾದ ಸಂಸ್ಥೆಗಳಿಂದ ದೃಢೀಕರಣ ಹೊಂದಿರತಕ್ಕದ್ದು.<br>6) ಫಲಾನುಭವಿಯು ಆರ್ಥಿಕವಾಗಿ BPL ಕಾರ್ಡ್ ಆಧಾರದ ಮೇಲೆ ಹಿಂದುಳಿದವರಾಗಿರತಕ್ಕದ್ದು. |
| ಇ) | ಸದರಿ ಮನೆ ನಿರ್ಮಿಸುವ ಪೂರ್ವದಲ್ಲಿ ಫಲಾನುಭವಿಯ ಜಮೀನನ್ನು ಭೂ ಪರಿವರ್ತನೆಗೊಳಿಸುವ ಮತ್ತು ನಿವೇಶನಕ್ಕೆ ವಿನ್ಯಾಸ ಅನುಮೋದನೆ ಮತ್ತು ಖಾತಾ ಪ್ರಮಾಣ ಪತ್ರ ಪಡೆಯುವ ಅಗತ್ಯವಿದೆಯೇ; ಸದರಿ ಪ್ರಕ್ರಿಯೆಯಿಂದ ವಿನಾಯಿತಿ ನೀಡಲಾಗಿದೆಯೇ;<br>(ವಿನಾಯಿತಿ ನೀಡಲಾಗಿದ್ದಲ್ಲಿ ಸರ್ಕಾರದ ಆದೇಶದ ಪ್ರತಿ ನೀಡುವುದು); | ಜಮೀನು ಭೂ ಪರಿವರ್ತನೆ, ನಿವೇಶನಕ್ಕೆ ವಿನ್ಯಾಸ ಅನುಮೋದನೆ ಮತ್ತು ಖಾತಾ ಪ್ರಮಾಣ ಪತ್ರವನ್ನು ಮೀನುಗಾರಿಕೆ ಇಲಾಖೆಯಿಂದ ನೀಡುತ್ತಿರುವುದಿಲ್ಲ.<br>ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 158 ಮೀಇಯೋ 2024 ಬೆಂಗಳೂರು ದಿನಾಂಕ: 18-11-2025 ರಲ್ಲಿ ರಾಜ್ಯದ ಮಲೆನಾಡಿನ ಆರು ಜಿಲ್ಲೆಗಳಾದ ಶಿವಮೊಗ್ಗ, ಕೊಡಗು, ಚಿಕ್ಕಮಗಳೂರು, ದಕ್ಷಿಣ ಕನ್ನಡ , ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಸೀಮಿತಗೊಳಿಸಿ ಮತ್ಸ್ಯಾಶ್ರಯ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ಕೆಲವು ಷರತ್ತುಗಳಿಗೊಳಪಟ್ಟು ನಿವೇಶನ / ಮನೆ ಕಡ್ಡಾಯ ನೊಂದಣಿಯಿಂದ ವಿನಾಯಿತಿ ನೀಡಿ ಆದೇಶಿಸಿದೆ (ಪ್ರತಿ ಲಗತ್ತಿಸಿದೆ). ಸದರಿ ಆದೇಶದನ್ವಯ ಫಲಾನುಭವಿಗಳು RTC / ಹಕ್ಕುಪತ್ರಗಳನ್ನು ಹಾಜರುಪಡಿಸುವುದರಿಂದ ವಿನಾಯಿತಿ ನೀಡಲಾಗಿದೆ. |
| ಈ) | ಮಂಜೂರಾದ ಮನೆಗಳನ್ನು ನಿರ್ಮಿಸಲು ಫಲಾನುಭವಿಯು ಕಟ್ಟಡ ಲೈಸೆನ್ಸ್ ಪಡೆಯುವುದು ಕಡ್ಡಾಯವೇ; ಕಡ್ಡಾಯವಾಗಿದ್ದಲ್ಲಿ, ಸದರಿ ಲೈಸೆನ್ಸ್ ವಿತರಿಸುವ ಪ್ರಾಧಿಕಾರ ಯಾವುದು; | ಮಂಜೂರಾದ ಮನೆಗಳನ್ನು ನಿರ್ಮಿಸಲು ಫಲಾನುಭವಿಯು ಕಟ್ಟಡ ಲೈಸೆನ್ಸ್ ಪಡೆಯುವುದು ಕಡ್ಡಾಯವಾಗಿರುತ್ತದೆ. ಸಂಬಂಧಪಟ್ಟ ಗ್ರಾಮ ಪಂಚಾಯತ್ / ಪುರಸಭೆ / ನಗರಸಭೆ / ಪಟ್ಟಣ ಪಂಚಾಯತ್ ಮುಂತಾದ ಸಂಸ್ಥೆಗಳು ಸದರಿ ಲೈಸೆನ್ಸ್‌ನ್ನು ವಿತರಿಸುವ ಪ್ರಾಧಿಕಾರವಾಗಿರುತ್ತವೆ. |

| | | |
|---|---|---|
| ಉ) | ಕಳೆದ ಮೂರು ವರ್ಷಗಳಿಂದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಮಂಜೂರು ಮಾಡಲಾದ ಮನೆಗಳಿಗೆ ಕಟ್ಟಡ ಲೈಸೆನ್ಸ್ ಮತ್ತು ಪೂರ್ಣಗೊಂಡ ಮನೆಗಳಿಗೆ ಕದನಂಬ್ರ ನೀಡಲು ಬಾಕಿ ಇರುವ ಫಲಾನುಭವಿಗಳ ವಿವರವನ್ನು ಗ್ರಾಮ ಪಂಚಾಯತ್‌ವಾರು ನೀಡುವುದು. ಸದರಿ ಕಟ್ಟಡ ಲೈಸೆನ್ಸ್ ಮತ್ತು ಕದ ನಂಬ್ರ ನೀಡಲು ಬಾಕಿ ಇದ್ದಲ್ಲಿ ಕಾರಣವೇನು; | 2024-25ನೇ ಸಾಲಿನಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಜೂರು ಮಾಡಲಾದ ಮನೆಗಳಿಗೆ ಕಟ್ಟಡ ಲೈಸೆನ್ಸ್ ನೀಡಲು ಬಾಕಿ ಇರುವ ಫಲಾನುಭವಿಗಳ ವಿವರವನ್ನು ಅನುಬಂಧ-2 ರಲ್ಲಿ ನೀಡಿದೆ. ಉಡುಪಿ ಜಿಲ್ಲೆಯಲ್ಲಿ ಈ ರೀತಿಯ ಪ್ರಕರಣಗಳು ವರದಿಯಾಗಿರುವುದಿಲ್ಲ. |
| ಊ) | 2023-24ನೇ ಸಾಲಿನ ನಂತರ ವಿತರಿಸಲಾದ ಮನೆಗಳ ಪೈಕಿ ತಳಪಾಯ, ಗೋಡೆ, ಚಾವಣಿ ಮತ್ತು ಪೂರ್ಣಗೊಂಡ ಫಲಾನುಭವಿಗಳ ಪೈಕಿ ವಿವಿಧ ಹಂತಗಳಲ್ಲಿ ಅನುದಾನ ಬಿಡುಗಡೆಗೊಳಿಸಲು ಇರುವ ಫಲಾನುಭವಿಗಳು ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು ) | 2023-24ನೇ ಸಾಲಿನ ನಂತರ 2024-25ನೇ ಸಾಲಿನಲ್ಲಿ ವಿತರಿಸಲಾದ ಮನೆಗಳ ಪೈಕಿ ಪಾಯದ ಹಂತದಲ್ಲಿ - 587 , ಲಿಂಟಲ್ ಹಂತದಲ್ಲಿ - 86, ಮತ್ತು ಪೂರ್ಣಗೊಂಡ-2 ಫಲಾನುಭವಿಗಳಿಗೆ ಅನುದಾನ ಬಿಡುಗಡೆಗೊಳಿಸಬೇಕಾಗಿರುತ್ತದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ – 03 ರಲ್ಲಿ ಲಗತ್ತಿಸಿದೆ. |

ಸಂಖ್ಯೆ: ಪಸಂಮೀ ಇ-64 ಮೀಇಯೋ 2026

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು.

ಅನುಬಂಧ – 01

| ಕ್ರಸಂ | ಜಿಲ್ಲೆ | ಹಂಚಿಕೆ ಮಾಡಲಾದ ಮನೆಗಳ ಸಂಖ್ಯೆ | | ಆಯ್ಕೆಮಾಡಲಾದ ಫಲಾನುಭವಿಗಳು | |
|---|---|---|---|---|---|
| | | 2022-23 | 2024-25 | 2022-23 | 2024-25 |
| 1 | ಉಡುಪಿ | 704 | 586 | 554 | 114 |
| 2 | ಉತ್ತರಕನ್ನಡ | 442 | 601 | 312 | 87 |
| 3 | ಕಲಬುರುಗಿ | 218 | 392 | 97 | 43 |
| 4 | ಕೊಡಗು | 60 | 50 | 59 | 42 |
| 5 | ಕೊಪ್ಪಳ | 205 | 185 | 195 | 161 |
| 6 | ಕೋಲಾರ | 202 | 276 | 164 | 63 |
| 7 | ಗದಗ | 25 | 101 | 25 | 41 |
| 8 | ಚಾಮರಾಜನಗರ | 36 | 165 | 36 | 24 |
| 9 | ಚಿಕ್ಕಬಳ್ಳಾಪುರ | 69 | 304 | 57 | 36 |
| 10 | ಚಿಕ್ಕಮಗಳೂರು | 145 | 175 | 11 | 16 |
| 11 | ಚಿತ್ರದುರ್ಗ | 100 | 230 | 82 | 70 |
| 12 | ತುಮಕೂರು | 230 | 497 | 202 | 100 |
| 13 | ದಕ್ಷಿಣಕನ್ನಡ | 625 | 425 | 465 | 195 |
| 14 | ದಾವಣಗೆರೆ | 41 | 225 | 37 | 113 |
| 15 | ಧಾರವಾಡ | 40 | 295 | 35 | 5 |
| 16 | ಬಳ್ಳಾರಿ | 82 | 125 | 19 | 3 |
| 17 | ಬಾಗಲಕೋಟೆ | 113 | 193 | 96 | 42 |
| 18 | ಬೀದರ್ | 100 | 510 | 49 | 0 |
| 19 | ಬೆಂಗಳೂರು (ಗ್ರಾ) | 36 | 101 | 15 | 61 |
| 20 | ಬೆಂಗಳೂರು (ನ) | 17 | 700 | 17 | 0 |
| 21 | ಬೆಳಗಾವಿ | 400 | 849 | 362 | 62 |
| 22 | ಮಂಡ್ಯ | 146 | 255 | 98 | 20 |
| 23 | ಮೈಸೂರು | 147 | 326 | 89 | 40 |
| 24 | ಯಾದಗಿರಿ | 42 | 118 | 15 | 9 |
| 25 | ರಾಮನಗರ | 99 | 300 | 86 | 89 |
| 26 | ರಾಯಚೂರು | 83 | 261 | 25 | 28 |
| 27 | ವಿಜಯನಗರ | 143 | 160 | 131 | 79 |
| 28 | ವಿಜಯಪುರ | 181 | 455 | 59 | 21 |
| 29 | ಶಿವಮೊಗ್ಗ | 87 | 175 | 73 | 90 |
| 30 | ಹಾವೇರಿ | 96 | 191 | 95 | 43 |
| 31 | ಹಾಸನ | 69 | 253 | 58 | 28 |
| | Grand Total | 4983 | 9479 | 3618 | 1725 |

xxx

## ಅನುಬಂಧ-2

**ಕಳೆದ ಮೂರು ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಜೂರು ಮಾಡಲಾದ ಮನೆಗಳಿಗೆ ಕಟ್ಟಡ ಲೈಸೆನ್ಸ್ ನೀಡಲು ಬಾಕಿ ಇರುವ ಫಲಾನುಭವಿಗಳ ಗ್ರಾಮ ಪಂಚಾಯತ್ ವಾರು ವಿವರ ಈ ಕೆಳಗಿನಂತಿದೆ.**

| ಕ್ರ. ಸಂ. | ಫಲಾನುಭವಿಯ ಹೆಸರು ಮತ್ತು ವಿಳಾಸ | ಗ್ರಾಮ / ಪಟ್ಟಣ ಪಂಚಾಯತ್ ಹೆಸರು |
|---|---|---|
| 1 | ರಮ್ಲತ್, ಕೋಂ: ದಿ|| ಮಹಮ್ಮದ್, 1-1/ಎ, ಶಾಂತಿನಗರ ಮನೆ, ಪಡ್ನೂರು ಗ್ರಾಮ ಮತ್ತು ಅಂಚೆ, ಪುತ್ತೂರು. | ಬನ್ನೂರು |
| 2 | ಸಾರಮ್ಮ ಕೆ., (ಪರಿತ್ಯಕ್ತೆ), ಕೋಂ:ಯೂಸುಫ್ ಕೊಯಿಲ 3-99ಬಿ ಕೊಯಿಲ ಮನೆ, ಬಡಗನ್ನೂರು ಅಂಚೆ ಪುತ್ತೂರು ತಾಲೂಕು, ದಕ್ಷಿಣ ಕನ್ನಡ. | ಬಡಗನ್ನೂರು |
| 3 | ರಾಜೀವಿ ಡಿ, (ವಿಧವೆ), ಕೋಂ: ದಿ ಪದ್ಮನಾಭ ಗೌಡ, 3-233, ಮುರ ಮನೆ, ಕಬಕ ಗ್ರಾಮ, ನೆಹರುನಗರ ಅಂಚೆ ಪುತ್ತೂರು ತಾಲೂಕು, ದಕ್ಷಿಣ ಕನ್ನಡ. | ಕಬಕ |
| 4 | ಎನ್ ಪುಷ್ಪ, ಕೋಂ: ದಿ|| ಚಂದ್ರಶೇಖರ, ಮುರ ಮನೆ, ಕಬಕ ಗ್ರಾಮ, ನೆಹರು ನಗರ ಅಂಚೆ, ಪುತ್ತೂರು | ಕಬಕ |
| 5 | ವೇದಾವತಿ ಕೆ, ಕೋಂ: ನವೀನ್ ಪೂಜಾರಿ, 2-284 ಅಗ್ರಹಾರ ಬೀದಿ, ನಾವೂರು ಗ್ರಾಮ ಮತ್ತು ಅಂಚೆ, ಬಂಟ್ವಾಳ ತಾಲೂಕು ದಕ್ಷಿಣ ಕನ್ನಡ. | ನಗರಸಭಾ ಕಾರ್ಯಾಲಯ ಪುತ್ತೂರು |
| 6 | ಬಾಗಿ, ಕೋಂ: ಬಟ್ಯ, 3-212/ ಪಿ. ಸಜಂಕಡಿ ಮನೆ, ಈಶ್ವರ ಮಂಗಳ ಪೋಸ್ಟ್, ಸುಳ್ಯಪದವು, ಪಡುವನ್ನೂರು ಗ್ರಾಮ, ಪುತ್ತೂರು ತಾಲೂಕು, ದಕ್ಷಿಣ ಕನ್ನಡ. | ಬಡಗನ್ನೂರು |
| 7 | ಕೃಷ್ಣಪ್ಪ ಕೆ (ಪತ್ನಿ: ಉಷಾ ಎಂ.) ಬಿನ್: ಪೆರ್ನ ಮುಗೇರ, 3-262 ಕಣಿಯಾರು, ಬೈಲು ಮನೆ ಮಾಡಾವು ಅಂಚೆ, ಕೆಯ್ಯೂರು, ಪುತ್ತೂರು ತಾಲೂಕು, ದಕ್ಷಿಣ ಕನ್ನಡ | ಕೆಯ್ಯೂರು |
| 8 | ಹರ್ಷಿತಾ (ಪರಿತ್ಯಕ್ತೆ), ಬಿನ್ ಸಾಂತಪ್ಪ ಪೂಜಾರಿ #7/143, ಕುಂದ್ರುಕೋಟೆ ಮನೆ ನೆಹರುನಗರ ಅಂಚೆ, ಕಬಕ ಗ್ರಾಮ, ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ನಗರಸಭಾ ಕಾರ್ಯಾಲಯ ಪುತ್ತೂರು |
| 9 | ಲಿಂಗಪ್ಪ ನಾಯ್ಕ ಯು (ಪತ್ನಿ: ಚಂದ್ರಾವತಿ ಯು.), ಬಿನ್: ಐತಪ್ಪ ನಾಯ್ಕ ಯು, 2-268(1), ಕಂಡಿಗ ಮನೆ, ಕೇಪು ಗ್ರಾಮ, ಬಂಟ್ವಾಳ ತಾಲೂಕು ದಕ್ಷಿಣ ಕನ್ನಡ ಜಿಲ್ಲೆ. | ಕೇಪು |
| 10 | ಅಸ್ಮಾ ಎಂ, ಕೋಂ:ಮಹಮ್ಮದ್, ಆಲಂಗೂರು ಮನೆ, ಒಳಮೊಗ್ರು ಗ್ರಾಮ, ಕುಂಬ್ರ ಅಂಚೆ, ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ಒಳಮೊಗ್ರು |
| 11 | ಖತೀಜಾ ಎಸ್ ಎಮ್, ಕೋಂ: ಮೊಹಮ್ಮದ್ ರಫೀಕ್ ಇ, 2-217, ಇಡಿಂಜಿಲ ಮನೆ, ಒಳಮೊಗ್ರು ಗ್ರಾಮ, ಕುಂಬ್ರ ಅಂಚೆ, ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ಒಳಮೊಗ್ರು |
| 12 | ಶಾರದಾ, ಕೋಂ: ಗೋಪಾಲ ನಾಯಕ್, 1-53/1ಡಿ, ಜನತಾ ಕಾಲೋನಿ ಮನೆ, ಬಲ್ನಾಡು ರೂರಲ್, ಉಜಿರುಪಾದೆ ಅಂಚೆ, ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ನಗರಸಭಾ ಕಾರ್ಯಾಲಯ ಪುತ್ತೂರು |
| 13 | ರಮ್ಯ ಕೆ, ಕೋಂ: ದಿವಾಕರ ಪಿ, 3-86, ಪಾರ ಮನೆ, ಬೆಟ್ಟಂಪಾಡಿ ಗ್ರಾಮ, ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ಬೆಟ್ಟಂಪಾಡಿ |
| 14 | ಸರಸ್ವತಿ (ವಿಧವೆ) ಕೋಂ: ದಿ|| ಅಂಗಜ 3-280 ಕಣಿಯಾರು ಬೈಲು ಮನೆ ಕೆಯ್ಯೂರು ಗ್ರಾಮ ಮಾಡಾವು ಅಂಚೆ ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ಕೆಯ್ಯೂರು |
| 15 | ಫಾತಿಮತ್ ಝೋರಾ, ಕೋಂ ಹಸೈನಾರ್ 2-200 ಪೇರಲ್ತಡ್ಕ ಮನೆ ಇರ್ದೆ ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ಬೆಟ್ಟಂಪಾಡಿ |
| 16 | ಮಾಣಿಗ (ವಿಧವೆ) ಕೋಂ: ದಿ|| ಪಿಜಿನ, 3-281 ಕಣಿಯಾರು ಬೈಲು ಮನೆ ಕೆಯ್ಯೂರು ಗ್ರಾಮ ಮಾಡಾವು ಅಂಚೆ ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ಕೆಯ್ಯೂರು |
| 17 | ಪರಮೇಶ್ವರ ಗೌಡ (ಪತ್ನಿ: ವೀಣಾ ಪಿ.) ಕೋಂ: ಸೇಸಪ್ಪ ಗೌಡ 6-60/ಏ1, ಅವೆತಿಕಲ್ಲು ಮನೆ ವಿಟ್ಲಕಸಬ ಗ್ರಾಮ ಮಂಗಳಪದವು ಪೋಸ್ಟ್ ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ | ವಿಟ್ಲ ಪಟ್ಟಣ ಪಂಚಾಯತ್ ಕಾರ್ಯಾಲಯ |
| 18 | ಮಹಮ್ಮದ್ (ಪತ್ನಿ: ಜಮೀಳ), ಬಿನ್: ಇಸುಬು ಬ್ಯಾರಿ, #2-200, ಪೇರಲ್ತಡ್ಕ ಮನೆ, ಇರ್ದೆ ಗ್ರಾಮ, ಪುತ್ತೂರು ತಾಲೂಕು. | ಬೆಟ್ಟಂಪಾಡಿ |
| 19 | ಇ ಫಾತಿಮಾ, ಕೋಂ:ಅಬ್ದುಲ್ ಸಮದ್, 2-73ಹೆಚ್, ನಿಡ್ಯಾಣ ಮನೆ, ಕದಂಬಾಡಿ, ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ಕೆದಂಬಾಡಿ |
| 20 | ಮೊಹಮ್ಮದ್(ಪತ್ನಿ: ನೆಬಿಸ), ಬಿನ್: ಅಬ್ದುಲ್ಲಾ, ಕಲ್ಲಿಮಾರ್ ಮನೆ, ಮಾಡ್ನೂರು ಗ್ರಾಮ, ಕಾವು ಅಂಚೆ, ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ಅರಿಯಡ್ಕ |

| | | |
|---|---|---|
| 21 | ಗಿರಿಜ, ಕೋಂ: ಶ್ರೀಕಾಂತ, 2-53, ಬಂಗಾರಡ್ಕ ಮನೆ, ಆರ್ಯಾಪು ರೂರಲ್, ಪುತ್ತೂರು ತಾಲೂಕು, | ಆರ್ಯಾಪು |
| 22 | ವೀಣಾ ಕೆ, ಕೋಂ: ಜನಾರ್ದನ ಪಿ, 1-28, ಪರಿಗೇರಿ ಮನೆ, ಬಡಗನ್ನೂರು, ಪುತ್ತೂರು ತಾಲೂಕು, | ಬಡಗನ್ನೂರು |
| 23 | ಚನಿಯ ಮೇರ (ಪತ್ನಿ: ಕಮಲ), ಬಿನ್: ಕುಂಡ ಮೇರ, 2-551, ಸೋಣಂಗೇರಿ ಮನೆ, ಪಡುವನ್ನೂರು ಗ್ರಾಮ, ಸುಳ್ಯಪದವು ಅಂಚೆ, ಪುತ್ತೂರು ತಾಲೂಕು. | ಬಡಗನ್ನೂರು |
| 24 | ಘರ್ಜಾನ, ಕೋಂ: ಅಕ್ಬರ್, 5-183 ಮರೀಲ್ ಮನೆ, ದರ್ಬೆ ಅಂಚೆ, ಕೆಮ್ಮಿಂಜೆ (ಗ್ರಾಮಾಂತರ) ಪುತ್ತೂರು ತಾಲೂಕು. | ನರಿಮೊಗ್ರು |
| 25 | ಉಮಯ್ಯ ಬಾನು, ಕೋಂ:ಅಬೂಬಕ್ಕರ್ ಸಿದ್ದಿಕ್, 2-29, ಉಜಿರೋಡಿ ಮನೆ, ಒಳಮೊಗ್ರು ಗ್ರಾಮ ಮತ್ತು ಅಂಚೆ, ಪುತ್ತೂರು ತಾಲೂಕು, | ಒಳಮೊಗ್ರು |
| 26 | ಉಜಿರೋಡಿ ಕಾಸಿಂ, (ಪತ್ನಿ:ಸೈನಬ ಶಹಬಾನ) ಬಿನ್: ಅದ್ರಾಮ ಬ್ಯಾರಿ, ನಂ.2-27, ಉಜಿರೋಡಿ ಮನೆ, ಒಳಮೊಗರು ಕುಂಬ್ರ, ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ಒಳಮೊಗ್ರು |
| 27 | ಅಣ್ಣು (ಪತ್ನಿ:ಕಮಲ), ಬಿನ್: ತಿಪ್ಪ, 1-507, ಕುಂಬ್ರ ಮನೆ, ಕುಂಬ್ರ ಅಂಚೆ, ಒಳಮೊಗ್ರು ಗ್ರಾಮ ಪುತ್ತೂರು ತಾಲೂಕು. | ಒಳಮೊಗ್ರು |
| 28 | ಲಕ್ಷ್ಮೀ (ವಿಧವೆ), ಕೋಂ: ಎಚ್.ಎಮ್. ಪಿಜಿನ, ದೇರ್ಲ ಮನೆ ಕೆಯ್ಯೂರು, ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ಕೆಯ್ಯೂರು |
| 29 | ಸುಮತಿ (ಪರಿತ್ಯಕ್ತೆ), ಕೋಂ: ರಾಘವೇಂದ್ರ ರೈ 3-175 ಬಿ ಸಾರಕುಟೇಲು ಮನೆ, ಪಡುವನ್ನೂರು, ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ಬಡಗನ್ನೂರು |
| 30 | ಸುಮಯ್ಯ ಡಿ., ಕೊಂ: ಮಹಮ್ಮದ್ ಅಶ್ರಫ್, ನಂ. 07/416, ದಾಸರಬೆಟ್ಟು ಮನೆ, ವಿಟ್ಲ ಕಸಬಾ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ವಿಟ್ಲ ಪಟ್ಟಣ ಪಂಚಾಯತ್ |
| 31 | ರತ್ನಾ ಎಸ್., ಕೋಂ: ರಮೇಶ ನಾಯ್ಕ, ಮೇಗಿನ ಪಂಜ ಮನೆ, ಆರ್ಯಾಪು ಗ್ರಾಮ, ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ಆರ್ಯಾಪು |
| 32 | ದೇವಕಿ ಕೆ. (ವಿಧವೆ), ಕೋಂ: ದಿ\|\| ಪದ್ಮನಾಭ, 2-142 ಪುಳಿಂಚಾರು ಮನೆ ಅಳಿಕೆ ಗ್ರಾಮ ಮತ್ತು ಅಂಚೆ, ಬಂಟ್ವಾಳ ತಾಲೂಕು, ದ.ಕ. ಜಿಲ್ಲೆ. | ಅಳಿಕೆ |
| 33 | ಪುರಂದರ (ಪತ್ನಿ: ಶಾರದಾ ಕೆ), ಬಿನ್: ರಾಮಣ್ಣ ಗೌಡ, 3-41, ಕಂಪ ಮನೆ, ಕೆದಿಲ ಗ್ರಾಮ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ಕೆದಿಲ |
| 34 | ಅಬ್ದುಲ್ ಹಮೀದ್ (ಪತ್ನಿ: ಸಫಿಯಾ), ಬಿನ್: ಶೇಕಾಲಿ ಬ್ಯಾರಿ, 5-525ಸಿ/2, ಒಕ್ಕೆತ್ತೂರು ಹೌಸ್, ವಿಟ್ಲ ಕಸಬಾ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ವಿಟ್ಲ ಪಟ್ಟಣ ಪಂಚಾಯತ್ |
| 35 | ಜುಹುರಾ ಸಿ ಎಚ್., (ಪರಿತ್ಯಕ್ತೆ), ಕೋಂ ಅಬೂಬಕ್ಕರ್, 3-89-1, ಕುಕ್ಕುಪುಣಿ, ನಿಡ್ಪಳ್ಳಿ ಅಂಚೆ, ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ನಿಡ್ಪಳ್ಳಿ |
| 36 | ರಝಿಯ ಬಾನು (ವಿಧವೆ), ಕೋಂ: ದಿ\|\| ಖಲೀಲ್ ರಹಿಮಾನ್, 1-434, ಕುಂಬ್ರ ಮನೆ, ಕುಂಬ್ರ ಅಂಚೆ, ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ಒಳಮೊಗ್ರು |
| 37 | ನಳಿನಿ, ಕೋಂ: ಶಿವರಾಮ, #2-442, ನಿರ್ಪಾಡಿ ಮನೆ, ಒಳಮೊಗ್ರು ಗ್ರಾಮ, ಕುಂಬ್ರ ಪೋಸ್ಟ್, ಪುತ್ತೂರು ತಾಲೂಕು, ದ.ಕ. ಜಿಲ್ಲೆ-574210. | ಒಳಮೊಗ್ರು |
| 38 | ರುಕ್ಯ, ಕೋಂ: ಹಸೈನಾರ್, #2-143, ಬಾಳುಮೂಲೆ ಮನೆ, ಇರ್ದೆ, ಪುತ್ತೂರು ತಾಲೂಕು, ದ.ಕ. ಜಿಲ್ಲೆ-574259. | ಬೆಟ್ಟಂಪಾಡಿ |
| 39 | ಅಚ್ಯುತ ಯು, (ಪತ್ನಿ:ಲಲಿತ ಯು.) ಬಿನ್: ಗುರುವ, #2-6, ಉಪ್ಪಳಿಗೆ ಮನೆ, ಬೆಟ್ಟಂಪಾಡಿ, ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ-575259. | ಬೆಟ್ಟಂಪಾಡಿ |
| 40 | ಗಿರಿಜಾವತಿ, ಕೋಂ: ದಿ\|\| ದೇವದಾಸ್, 3-244-7 ಮೇನಾಲ ಮನೆ, ಈಶ್ವರಮಂಗಲ ಅಂಚೆ, ನೆಟ್ಟಣಿಗೆ ಮುಡ್ನೂರು, ಪುತ್ತೂರು ತಾಲೂಕು. | ನೆಟ್ಟಣಿಗೆ |
| 41 | ರುಕಿಯಾ, ಕೋಂ: ಮೊಹಮ್ಮದ್, #2-94/ಪಿ, ಮೈಂದನಡ್ಕ ಮನೆ, ಸುಳ್ಯಪದವು ಅಂಚೆ, ಪಡುವನ್ನೂರು ಗ್ರಾಮ, ಪುತ್ತೂರು ತಾಲೂಕು. | ಬಡಗನ್ನೂರು |
| 42 | ರತ್ನ, ಕೋಂ; ಉಮೇಶ, 2-26(1) ಅಗ್ರಾಳ ಮನೆ, ಪುಣಚ ಗ್ರಾಮ ಮತ್ತು ಅಂಚೆ, ಬಂಟ್ವಾಳ ತಾಲೂಕು-574243. | ಪುಣಚ |
| 43 | ಪುಷ್ಪಲತಾ, ಕೋಂ: ಬೇಬಿಕುಮಾರ್, ಕಲ್ತಡ್ಕ ಮನೆ, ಅಜ್ಜಾವರ ಗ್ರಾಮ ಮತ್ತು ಅಂಚೆ, ಸುಳ್ಯ ತಾಲೂಕು, ದಕ್ಷಿಣ ಕನ್ನಡ | ಅಜ್ಜಾವರ |
| 44 | ಪದ್ಮಾವತಿ, ಕೋಂ: ದಿ\| ಕರಿಯಪ್ಪ, 2-17(1) ನೆಲ್ಲಜಾಲು ಮನೆ, ಕುಂತೂರು ಗ್ರಾಮ, ಪೆರಾಬೆ ಅಂಚೆ, ಕಡಬ ತಾಲೂಕು, ದಕ್ಷಿಣ ಕನ್ನಡ | ಪೆರಾಜೆ |
| 45 | ಈಶ್ವರ ಕೆ., (ಪತ್ನಿ: ಜಯಲತಾ ಜೆ) ಬಿನ್: ರೋಜಪ್ಪ ಗೌಡ, 2-18, ಕಾಯರ ಅಮರಪಡ್ನೂರು, ಚೊಕ್ಕಾಡಿ, ಸುಳ್ಯ ತಾಲೂಕು, ದಕ್ಷಿಣ ಕನ್ನಡ | ಅಮರಮುಡ್ನೂರು |
| 46 | ರಾಜೀವಿ ಕೆ, (ವಿಧವೆ) ಕೋಂ: ದಿ. ತಿಮ್ಮಪ್ಪ ಗೌಡ ಎಮ್ ಕೆ, ಕೊಲ್ಲುಮಜಲು ಮನೆ, ಕನಕಮಜಲು ಗ್ರಾಮ, ಸುಳ್ಯ ತಾಲೂಕು, ದಕ್ಷಿಣ ಕನ್ನಡ | ಕನಕಮಜಲು |
| 47 | ಆಶಿತ್ ಕುಮಾರ್ ಕೆ, (ಪತ್ನಿ: ರೇಖಾ) ಬಿನ್: ನಾರಾಯಣ ರೈ ಕೆ, 1-50, ಕೆಳಗಿನ ಕುಂಜಾಡಿ ಮನೆ, ಪಾಲ್ತಾಡಿ ಗ್ರಾಮ ಮತ್ತು ಅಂಚೆ, ಕಡಬ ತಾಲೂಕು ದಕ್ಷಿಣ ಕನ್ನಡ | ಸವಣೂರು |
| 48 | ಮಮತ, ಕೋಂ: ವೆಂಕಪ್ಪ, ಉಪ್ಪೋಳಿಗೆ ಮನೆ, ಗೋಳಿತ್ತೊಟ್ಟು, ಕಡಬ ತಾಲೂಕು | ಗೋಳಿತ್ತೊಟ್ಟು |

| | | |
|---|---|---|
| 49 | ಕಮಲ ಎಸ್(ವಿಧವೆ), ಕೋಂ.ದಿ|| ಚಂರ್ಬ, 1-20, ಸೋಂಪಾಡಿ, ಪುಣ್ಚಪ್ಪಾಡಿ, ಸವಣೂರು ಗ್ರಾಮ, ಕಡಬ ತಾಲೂಕು, ದಕ್ಷಿಣ ಕನ್ನಡ. | ಸವಣೂರು |
| 50 | ಕೆ ಇಸ್ಮಾಯಿಲ್ (ಪತ್ನಿ: ಫಾತಿಮತ್ ಝೌರ) ಬಿನ್: ಅಬ್ಬಾಸ್, 2-10, ಕುಂಡಡ್ಕ ಮನೆ, ಪೆರುವಾಜೆ, ಸುಳ್ಯ ತಾಲೂಕು, ದಕ್ಷಿಣ ಕನ್ನಡ | ಪೆರುವಾಜೆ |
| 51 | ಕಸ್ತೂರಿ ಪಿ., ಕೋಂ: ಕುಶಾಲಪ್ಪ, ಕುಕ್ಕುಜಡ್ಕ ಅಂಚೆ, ಅಮರಮುಡ್ನೂರು ಗ್ರಾಮ, ಸುಳ್ಯ ತಾಲೂಕು, ದಕ್ಷಿಣ ಕನ್ನಡ. | ಅಮರಮುಡ್ನೂರು |
| 52 | ಸರಸ್ವತಿ (ಪರಿತ್ಯಕ್ತೆ), ಕೋಂ: ಜಯಂತ, 1-56/4, ಶೇಣಿ ಮನೆ, ಚೊಕ್ಕಾಡಿ ಅಂಚೆ, ಅಮರಪಡ್ನೂರು ಗ್ರಾಮ, ಸುಳ್ಯ ತಾಲೂಕು, ದಕ್ಷಿಣ ಕನ್ನಡ-574212. | ಅಮರಮಡ್ನೂರು |
| 53 | ಬಾಲಕಿ ಎಮ್, ಕೋಂ: ಮೋನಪ್ಪ, 1-56/1, ಮಡಪ್ಪಾಡಿ ಮನೆ, ಮಡಪ್ಪಾಡಿ ಅಂಚೆ, ಸುಳ್ಯ ತಾಲೂಕು, ದಕ್ಷಿಣ ಕನ್ನಡ-574218 | ಮಡಪ್ಪಾಡಿ |
| 54 | ಜೀನತ್, ಕೋಂ: ಉಮರ್ ಕುಂಞ, ದರ್ಖಾಸ್ ಹೌಸ್, ಮಿತ್ತಬಾಗಿಲು ಗ್ರಾಮ, ಬೆಳ್ತಂಗಡಿ ತಾಲೂಕು. ದ.ಕ ಜಿಲ್ಲೆ | ಮಿತ್ತಬಾಗಿಲು |
| 55 | ಜುಬೈದಾ, ಕೋಂ: ಹಸೈನಾರ್, ಕಾಜೂರು ಮನೆ, ಮಲವಂತಿಗೆ ಬೆಳ್ತಂಗಡಿ ತಾಲೂಕು. ದ.ಕ ಜಿಲ್ಲೆ | ಮಲವಂತಿಗೆ |
| 56 | ಪುಷ್ಪಲತಾ, ಕೋಂ:ಸುಂದರ, #2-163(26), ಜನತಾ ಮನೆ, ಕಲ್ಲೇರಿ, ಕರಾಯ, ಬೆಳ್ತಂಗಡಿ ತಾಲೂಕು-574326. | ತಣ್ಣೀರುಪಂತ |
| 57 | ಫಾತಿಮತ್ ಝೌರಾ, ಕೋಂ: ಉಮ್ಮರ್ ಫಾರೂಕ್, #1-117/1, ನೆಲ್ಲಿಗುಡ್ಡೆ ಮನೆ, ಮಿತ್ತಬಾಗಿಲು, ಬೆಳ್ತಂಗಡಿ ತಾಲೂಕು. | ಮಿತ್ತಬಾಗಿಲು |
| 58 | ತಾಹಿರಾ (ವಿಧವೆ), ಕೋಂ: ದಿ||ರಝಾಕ್, ಮಡಲಮಕ್ಕಿ ಮನೆ, ಮಲವಂತಿಗೆ, ಬೆಳ್ತಂಗಡಿ ತಾಲೂಕು. | ಮಲವಂತಿಗೆ |
| 59 | ಈರಮ್ಮ, ಕೋಂ: ರಾಜು, #1-257, ಕುಕ್ಕಾವು ಮನೆ, ಮಿತ್ತಬಾಗಿಲು, ಕಿಲ್ಲೂರು ಪೋಸ್ಟ್, ಬೆಳ್ತಂಗಡಿ ತಾಲೂಕು. | ಮಿತ್ತಬಾಗಿಲು |
| 60 | ರಝಿಯ, ಕೋಂ: ಅಬ್ದುಲ್ ರಝಾಕ್, #1-125, ಪಾದೆಗುತ್ತು ಮನೆ, ಮಿತ್ತಬಾಗಿಲು, ಕಿಲ್ಲೂರು ಪೋಸ್ಟ್, ಬೆಳ್ತಂಗಡಿ ತಾಲೂಕು. | ಮಿತ್ತಬಾಗಿಲು |
| 61 | ನಫೀಸ, ಕೋಂ: ಅಬೂಬಕ್ಕರ್, #8-208, ಮುಗುಳಿ ಮನೆ, ಬೆಳ್ತಂಗಡಿ ತಾಲೂಕು. | ಬೆಳ್ತಂಗಡಿ ಪಟ್ಟಣ ಪಂಚಾಯತ್ |

xxx

# ಅನುಬಂಧ - 03

## 2024-25 ನೇ ಸಾಲಿನ ಮತ್ಸ್ಯಾಶ್ರಯ ಮನೆಗಳ ಪೈಕಿ ವಿವಿಧ ಹಂತಗಳಲ್ಲಿ ಅನುದಾನ ಬಿಡುಗಡೆಗೊಳಿಸಬೇಕಾಗಿರುವ ಫಲಾನುಭವಿಗಳ ಸಂಖ್ಯೆ (ಜಿಲ್ಲಾವಾರು ಮಾಹಿತಿ )

| ಕ್ರಸಂ | ಜಿಲ್ಲೆ | ಮನೆಗಳ ಪ್ರಗತಿ | | |
|---|---|---|---|---|
| | | 1ನೇ ಹಂತ - ಪಾಯ | 2 ನೇ ಹಂತ - ಲಿಂಟಲ್ | 3 ನೇ ಹಂತ - ಪೂರ್ಣ |
| 1 | ಬೆಂಗಳೂರು (ಗ್ರಾ) | 17 | 4 | |
| 2 | ತುಮಕೂರು | 27 | 1 | |
| 3 | ಬೆಂಗಳೂರು (ನ) | | | |
| 4 | ಚಿಕ್ಕಬಳ್ಳಾಪುರ | 15 | | |
| 5 | ಬೆಂಗಳೂರು (ದಕ್ಷಿಣ) | 40 | 10 | 1 |
| 6 | ಕೋಲಾರ | 28 | 4 | |
| 7 | ಶಿವಮೊಗ್ಗ | 45 | 7 | |
| 8 | ಚಿತ್ರದುರ್ಗ | 35 | 5 | |
| 9 | ದಾವಣಗೆರೆ | 63 | 24 | 1 |
| 10 | ಚಿಕ್ಕಮಗಳೂರು | 1 | 1 | |
| 11 | ಬೆಳಗಾವಿ | 18 | | |
| 12 | ವಿಜಯಪುರ | | | |
| 13 | ಧಾರವಾಡ | | | |
| 14 | ಬಾಗಲಕೋಟೆ | | | |
| 15 | ಗದಗ | 1 | | |
| 16 | ಹಾವೇರಿ | 14 | 7 | |
| 17 | ಚಾಮರಾಜನಗರ | 10 | | |
| 18 | ಮಂಡ್ಯ | 13 | 1 | |
| 19 | ಮೈಸೂರು | 9 | | |
| 20 | ಹಾಸನ | 5 | | |
| 21 | ಕೊಡಗು | 17 | 4 | |
| 22 | ಬಳ್ಳಾರಿ | 3 | 3 | |
| 23 | ರಾಯಚೂರು | 1 | 1 | |
| 24 | ವಿಜಯನಗರ | 29 | 6 | |
| 25 | ಬೀದರ್ | | | |
| 26 | ಯಾದಗಿರಿ | | | |
| 27 | ಕೊಪ್ಪಳ | 58 | 1 | |
| 28 | ಕಲಬುರುಗಿ | | | |
| 29 | ದಕ್ಷಿಣ ಕನ್ನಡ | 69 | 4 | |
| 30 | ಉತ್ತರಕನ್ನಡ | 11 | 1 | |
| 31 | ಉಡುಪಿ | 58 | 2 | |
| | ಒಟ್ಟು | 587 | 86 | 2 |

xxx

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ರಾಜ್ಯದ ಮಲೆನಾಡಿನ ಆರು ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ, ಕೊಡಗು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಿಗೆ ಸೀಮಿತಗೊಳಿಸಿ ಮತ್ಸ್ಯಾಶ್ರಯ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ನಿವೇಶನ/ಮನೆ ಕಡ್ಡಾಯ ನೋಂದಣಿಯಿಂದ ವಿನಾಯಿತಿಯನ್ನು ನೀಡುವ ಬಗ್ಗೆ.

**ಓದಲಾಗಿದೆ:-** ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರ ಪತ್ರ ಸಂಖ್ಯೆ: DOF-TECH/10/2024, ದಿನಾಂಕ: 29-07-2024.

******

**ಪ್ರಸ್ತಾವನೆ:**

ಮೇಲೆ ಓದಲಾದ ನಿರ್ದೇಶಕರು, ಮೀನುಗಾರಿಕೆ ಇವರ ಪತ್ರದಲ್ಲಿ, ರಾಜ್ಯದ ಮಲೆನಾಡು ಪ್ರದೇಶಗಳಾದ ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ, ಕೊಡಗು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಅರಣ್ಯ ಪ್ರದೇಶದ ವಿಸ್ತೀರ್ಣವು ಇತರೆಡೆಗಳಿಗಿಂತ ಹೆಚ್ಚಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಬಡತನ ರೇಖೆಗಳಿಗಿಂತ ಕೆಳಗಿನ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮೀನುಗಾರಿಕೆ ಅವಲಂಬಿತ ಕುಟುಂಬಗಳು ನಿರ್ವಸಿತರಾಗಿದ್ದು, ಗ್ರಾಮಠಾಣ, ಗೋಮಾಳ, ಅರಣ್ಯ ಪ್ರದೇಶವನ್ನು ಅತಿಕ್ರಮಣ ಹಾಗೂ ಇತರ ಪ್ರದೇಶಗಳಲ್ಲಿ ಕಚ್ಚಾಮನೆಯನ್ನು ನಿರ್ಮಿಸಿಕೊಂಡು ವಾಸವಾಗಿರುತ್ತಾರೆ. ಮಳೆಗಾಲದಲ್ಲಿ ಈ ಪ್ರದೇಶದಲ್ಲಿ ಸುರಿಯುವ ಬಾರಿ ಮಳೆಗೆ ಇಂತಹ ಮನೆಗಳಲ್ಲಿ ಜೀವನ ಸಾಗಿಸುವುದು ಸಾಧ್ಯವಾಗದೇ ಕಷ್ಟಗಳನ್ನು ಎದುರಿಸುತ್ತಿದ್ದಾರೆ. ಇಂತಹ ಕುಟುಂಬಗಳು ನಿವೇಶನ ಒಡೆತನದ ಬಗ್ಗೆ ಆರ್.ಟಿ.ಸಿ/ಹಕ್ಕು ಪತ್ರಗಳು ಇಲ್ಲದೇ ಇರುವುದರಿಂದ ವಸತಿ ಯೋಜನೆಯ ಉಪಯೋಗ ಪಡೆಯಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿರುತ್ತಾರೆ.

ಮುಂದುವರೆದು, ವಸತಿ ಇಲಾಖೆಯಿಂದ ಸಂಖ್ಯೆ: ವಇ 220 ಹೆಚ್‌ಎಎಂ 2012, ದಿನಾಂಕ:19-01-2013 ಮತ್ತು 15-02-2013 ರಲ್ಲಿ ಆದೇಶಗಳಲ್ಲಿ ಮಲೆನಾಡಿನ ನಾಲ್ಕು ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ ಹಾಗು ಕೊಡಗು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಸರ್ಕಾರಿ ವಸತಿ ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳು ಗ್ರಾಮಠಾಣ, ಗೋಮಾಳ ಹಾಗೂ ಇತರೆ ಸರ್ಕಾರಿ ಭೂಮಿಯನ್ನು ಅತಿಕ್ರಮಣ ಮಾಡಿ (ಅರಣ್ಯಕ್ಕೆ ಸೇರಿದ ಜಮೀನನ್ನು ಹೊರತುಪಡಿಸಿ) ಅನೇಕ ವರ್ಷಗಳಿಂದ ಗುಡಿಸಲು ಅಥವಾ ಕಚ್ಚಾ ಮನೆಯಲ್ಲಿ ವಾಸಿಸುತ್ತಿರುವವರಿಗೆ ಆದೇಶದಲ್ಲಿ ಕೆಳಕಂಡ ಷರತ್ತಿಗೊಳಪಟ್ಟು ಕಡ್ಡಾಯ ನೋಂದಣಿಯಿಂದ ವಿನಾಯಿತಿ ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

1. ಫಲಾನುಭವಿಯು ಬಹಳಷ್ಟು ವರ್ಷಗಳಿಂದ ಅತಿಕ್ರಮಣ ಮಾಡಿಕೊಂಡ ಸರ್ಕಾರಿ ಜಮೀನಿನಲ್ಲಿ ವಾಸ ಮಾಡುತ್ತಿರಬೇಕು.
2. ಫಲಾನುಭವಿಯು ಗ್ರಾಮ ಸಭೆಯಲ್ಲಿ ಆಯ್ಕೆಗೊಂಡಿರಬೇಕು.
3. ಸದರಿ ಫಲಾನುಭವಿಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಮನೆ ಮಂಜೂರಾಗಿರಬೇಕು.
4. ಫಲಾನುಭವಿಯು ಸಂಬಂಧಿಸಿದ ಗ್ರಾಮ ಪಂಚಾಯ್ತಿ ಅಧಿಕಾರಿಯಿಂದ ಅನೇಕ ವರ್ಷಗಳಿಂದ ವಾಸವಾಗಿರುವ ಬಗ್ಗೆ ಧೃಡೀಕರಣ ಪತ್ರ ಸಲ್ಲಿಸಬೇಕು.
5. ಫಲಾನುಭವಿಯು ಬಡತನ ರೇಖೆಗಿಂತ ಕೆಳಗಿರಬೇಕು.

6. ಫಲಾನುಭವಿಯು ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿಯನ್ನು ಒದಗಿಸತಕ್ಕದ್ದು.

ಸದರಿ ಆದೇಶವು ರಾಜ್ಯದ ಮಲೆನಾಡಿನ ಆರು ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು, ಉತ್ತರಕನ್ನಡ, ಕೊಡಗು, ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ.

ಸದರಿ ಆದೇಶದ ಆಧಾರದ ಮೇಲೆ ರಾಜೀವ್ ಗಾಂಧಿ ವಸತಿ ನಿಗಮವು ಕೆಲವೊಂದು ಷರತ್ತುಗಳನ್ನು ವಿಧಿಸಿ ಸರ್ಕಾರದ ವಸತಿ ಯೋಜನೆಯಡಿ ಫಲಾನುಭವಿಯಾಗಿ ಆಯ್ಕೆಯಾಗುವ ಫಲಾನುಭವಿಗಳಿಗೆ ಕಡ್ಡಾಯ ನೊಂದಣಿಯಿಂದ ವಿನಾಯಿತಿ ನೀಡಿ ಆದೇಶಿಸಿದೆ. ಅದರಂತೆ ಮೀನುಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಮತ್ಸ್ಯಾಶ್ರಯ ಯೋಜನೆಯಡಿ ಕೆಲವೊಂದು ಮಾರ್ಪಾಡುಗಳನ್ನು ಮಾಡಿ ಮತ್ಸ್ಯಾಶ್ರಯ ಯೋಜನೆಯ ಮಾರ್ಗಸೂಚಿಗಳನ್ನು ಆರು ಜಿಲ್ಲೆಗಳಿಗೆ ಸೀಮಿತವಾಗಿ ಪರಿಷ್ಕರಿಸುವಂತೆ ಕೆಳಕಂಡಂತೆ ಷರತ್ತುಗಳನ್ನು ವಿಧಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

**ಷರತ್ತುಗಳು:**

1. ಫಲಾನುಭವಿಯು ಕನಿಷ್ಠ 10 ವರ್ಷಗಳಿಂದ ಅತಿಕ್ರಮಣ ಮಾಡಿಕೊಂಡ ಸರ್ಕಾರಿ ಜಮೀನಿನಲ್ಲಿ ವಾಸ ಮಾಡುತ್ತಿರಬೇಕು. ಈ ಬಗ್ಗೆ ಸಂಬಂಧಿಸಿದ ಗ್ರಾಮಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ದೃಢೀಕರಣ ನೀಡಬೇಕು.
2. ಫಲಾನುಭವಿಯು ಮತ್ಸ್ಯಾಶ್ರಯ ಯೋಜನೆ ಆಯ್ಕೆ ಸಮಿತಿ ಸಭೆಯಲ್ಲಿ ಆಯ್ಕೆಗೊಂಡಿರಬೇಕು.
3. ಫಲಾನುಭವಿಯು ಬಿ.ಪಿ.ಎಲ್. ಕಾರ್ಡ್ ಹೊಂದಿರಬೇಕು.
4. ಮೀನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ಬಗ್ಗೆ ಕನಿಷ್ಠ 03 ವರ್ಷಗಳ ದಾಖಲೆ ಸಲ್ಲಿಸಬೇಕು.
5. ಪರಿಷ್ಕೃತ ಆದೇಶವು ರಾಜ್ಯದ 6 ಜಿಲ್ಲೆಗಳಲ್ಲಿ ಆಯ್ಕೆಯಾಗುವ ಮತ್ಸ್ಯಾಶ್ರಯ ಯೋಜನೆಯ ಫಲಾನುಭವಿಗಳಿಗೆ ಮಾತ್ರ ಅನ್ವಯವಾಗತಕ್ಕದು. ಸದರಿ ಆದೇಶದನ್ವಯ ಫಲಾನುಭವಿಗಳು ಆಸ್ತಿ ದಾಖಲೆಗಳಾದ RTC/ಹಕ್ಕು ಪತ್ರಗಳನ್ನು ಹಾಜರು ಪಡಿಸುವುದರಿಂದ ವಿನಾಯಿತಿ ನೀಡಬಹುದಾಗಿದೆ.
6. ಆದರೆ ಉಳಿದ ದಾಖಲೆಗಳಾದ ಜಾತಿ ಮತ್ತು ಆದಾಯ ಪ್ರಮಾಣಪತ್ರ, ಗ್ರಾಮಪಂಚಾಯತ್ ಧೃಡೀಕರಣ, ಮೀನುಗಾರಿಕೆ ವೃತ್ತಿಯಲ್ಲಿರುವ ಬಗ್ಗೆ ಧೃಡೀಕರಣ ಇನ್ನಿತರ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 158 ಮೀಇಯೋ 2024, ಬೆಂಗಳೂರು</u>**
**ದಿನಾಂಕ:18-11-2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ರಾಜ್ಯದ ಮಲೆನಾಡಿನ ಆರು ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ, ಕೊಡಗು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಿಗೆ ಸೀಮಿತಗೊಳಿಸಿ ಮತ್ಸ್ಯಾಶ್ರಯ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ಕೆಳಕಂಡ ಷರತ್ತುಗಳಿಗೊಳಪಟ್ಟು ನಿವೇಶನ / ಮನೆ ಕಡ್ಡಾಯ ನೊಂದಣಿಯಿಂದ ವಿನಾಯಿತಿ ನೀಡಿ ಆದೇಶಿಸಿದೆ.

1. ಫಲಾನುಭವಿಯು ಕನಿಷ್ಠ 10 ವರ್ಷಗಳಿಂದ ಅತಿಕ್ರಮಣ ಮಾಡಿಕೊಂಡ ಸರ್ಕಾರಿ ಜಮೀನಿನಲ್ಲಿ ವಾಸ ಮಾಡುತ್ತಿರಬೇಕು. ಈ ಬಗ್ಗೆ ಸಂಬಂಧಿಸಿದ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ದೃಢೀಕರಣ ನೀಡತಕ್ಕದ್ದು.
2. ಫಲಾನುಭವಿಯು ಮತ್ಸ್ಯಾಶ್ರಯ ಯೋಜನೆ ಆಯ್ಕೆ ಸಮಿತಿ ಸಭೆಯಲ್ಲಿ ಆಯ್ಕೆಗೊಂಡಿರತಕ್ಕದ್ದು.
3. ಫಲಾನುಭವಿಯು ಬಿ.ಪಿ.ಎಲ್ ಕಾರ್ಡ್ ಹೊಂದಿರತಕ್ಕದ್ದು.
4. ಮೀನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ಬಗ್ಗೆ ಕನಿಷ್ಠ 03 ವರ್ಷಗಳ ದಾಖಲೆ ಸಲ್ಲಿಸತಕ್ಕದ್ದು.

K.S. Chinnaki

5. ಪರಿಷ್ಕೃತ ಆದೇಶವು ರಾಜ್ಯದ 6 ಜಿಲ್ಲೆಗಳಲ್ಲಿ ಅಯ್ಕೆಯಾಗುವ ಮತ್ಸ್ಯಾಶ್ರಯ ಯೋಜನೆಯ ಫಲಾನುಭವಿಗಳಿಗೆ ಮಾತ್ರ ಅನ್ವಯವಾಗತಕ್ಕದ್ದು. ಸದರಿ ಆದೇಶದನ್ವಯ ಫಲಾನುಭವಿಗಳು ಆಸ್ತಿ ದಾಖಲೆಗಳಾದ RTC/ಹಕ್ಕು ಪತ್ರಗಳನ್ನು ಹಾಜರುಪಡಿಸುವುದರಿಂದ ವಿನಾಯಿತಿ ನೀಡಬಹುದಾಗಿದೆ.
6. ಆದರೆ, ಉಳಿದ ದಾಖಲೆಗಳಾದ ಜಾತಿ ಮತ್ತು ಆದಾಯ ಪ್ರಮಾಣಪತ್ರ ಗ್ರಾಮ ಪಂಚಾಯತ್ ದೃಢೀಕರಣ, ಮೀನುಗಾರಿಕೆ ವೃತ್ತಿಯಲ್ಲಿರುವ ಬಗ್ಗೆ ದೃಢೀಕರಣ ಇನ್ನಿತರ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
7. ಹಲವಾರು ವರ್ಷಗಳಿಂದ ಅರಣ್ಯ ಜಾಗದಲ್ಲಿ ಕಚ್ಚಾ ಮನೆ/ಗುಡಿಸಲು ನಿರ್ಮಿಸಿ ವಾಸ್ತವ್ಯ ಹೊಂದಿರತಕ್ಕದ್ದು.
8. ಗ್ರಾಮ ಪಂಚಾಯತಿಯಿಂದ ಮನೆ ನಂಬರ್ ಹೊಂದಿದ್ದು, ಗ್ರಾಮ ಪಂಚಾಯತಿಗೆ ಮನೆ ತೆರಿಗೆ ಪಾವತಿಸುತ್ತಿರುವ ಮತ್ತು ಸರ್ಕಾರದ ವಿವಿಧ ಇಲಾಖೆಗಳ ಸೌಲಭ್ಯವನ್ನು ಈಗಾಗಲೇ ಪಡೆದುಕೊಂಡಿರಬೇಕು.
9. ಸಹಾಯಧನ ಪಡೆದು ನಿರ್ಮಿಸಲಾದ ಮನೆಯ ನಿವೇಶನ ಆಸ್ತಿ ವಹಿ/ಆರ್.ಟಿ.ಸಿಯಲ್ಲಿ ಸರ್ಕಾರದಿಂದ ವಸತಿಗಾಗಿ ಸಹಾಯಧನ ಪಡೆದಿರುವವರೆಂದು ಬೋಜ ದಾಖಲಿಸತಕ್ಕದ್ದು.
10. ಅರಣ್ಯ ಪ್ರದೇಶದಲ್ಲಿ ವಾಸವಿರುವ ಕುಟುಂಬ ಪ್ರಸ್ತುತ ವಾಸವಾಗಿರುವ ಮನೆಯ ಜಾಗವನ್ನು ಯಾವುದೇ ಕಾರಣಕ್ಕೂ ವಿಸ್ತರಣೆ ಮಾಡಿಕೊಳ್ಳತಕ್ಕದ್ದಲ್ಲ.
11. ಅನುದಾನ ದುರುಪಯೋಗ ಯಾವುದೇ ಹಂತದಲ್ಲಿ ಕಂಡುಬಂದರೆ ನಿಯಮಾನುಸಾರ ಮನೆ ವಸತಿ ಬಡ್ಡಿ ಸಮೇತ ಅನುದಾನ ವಸೂಲಾತಿಗೆ ಕ್ರಮ ವಹಿಸತಕ್ಕದ್ದು."

ಈ ಆದೇಶವನ್ನು ವಸತಿ ಇಲಾಖೆಯ ಟಿಪ್ಪಣಿ ಸಂಖ್ಯೆ: ವಇ/184/ಹೆಚ್ಎಹೆಚ್/2024 ದಿನಾಂಕ: 24-01-2025 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

K.S. Chinnubai 18/11/2025
(ಚಿನ್ನುಬಾಯಿ ಕೆ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

**ಇವರಿಗೆ**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
5. ಮೀನುಗಾರಿಕೆ ನಿರ್ದೇಶಕರು, ಪೋಡಿಯಂ ಬ್ಲಾಕ್, 3ನೇ ಮಹಡಿ, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು.
6. ಸಂಬಂಧಪಟ್ಟ ಮೀನುಗಾರಿಕೆ ಜಂಟಿ ನಿರ್ದೇಶಕರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
8. ಸಂಬಂಧಪಟ್ಟವರುಗಳಿಗೆ - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
9. ಕಂಟ್ರೋಲ್ ರೂಮ್-ಕಂ-24x7 ಹೆಲ್ಪ್ ಲೈನ್ (ಸಹಾಯವಾಣಿ), ಮೀನುಗಾರಿಕೆ ಇಲಾಖೆ.
10. ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ

**ಪ್ರತಿಯನ್ನು**

1. ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿರವರ ಆಪ್ತ ಸಹಾಯಕರು, ಪಸಂಮೀ ಇಲಾಖೆ, ವಿಕಾಸಸೌಧ, ಬೆಂಗಳೂರು